# ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

**(ಕರ್ನಾಟಕ ಸರ್ಕಾರದ ಉದ್ದಿಮೆ)**

ನಂ. 1,2,3,4, ಐ.ಟಿ. ಪಾರ್ಕ್, 1ನೇ ಮಹಡಿ, 4ನೇ ಮುಖ್ಯರಸ್ತೆ, ರಾಜಾಜಿನಗರ
ಕೈಗಾರಿಕಾ ಪ್ರದೇಶ, ರಾಜಾಜಿನಗರ, ಬೆಂಗಳೂರು - 560 010

**RGRHCL**

| | | |
|---|---|---|
| 1. | ಯೋಜನೆಯ ಹೆಸರು | **ವಾಜಪೇಯಿ ನಗರ ನಿವೇಶನ ಯೋಜನೆ**<br>ನಗರ ಪ್ರದೇಶಗಳಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ನಿವೇಶನ ಕಲ್ಪಿಸುವ ಯೋಜನೆ. |
| 2. | ನಿವೇಶನದ ಅಳತೆ | ಗರಿಷ್ಠ **20x30** ಅಡಿ (ಪ್ರತಿ ಫಲಾನುಭವಿಗೆ) |
| 3. | ಆರ್ಥಿಕ ಸಹಾಯ ಒದಗಿಸುವ ವಿಧಾನಗಳು : (ವಿ.ಸೂ.: ನಿವೇಶನಗಳ ಹಂಚಿಕೆ / ನಿರ್ಮಾಣಕ್ಕೆ ಬೇಕಾಗುವ ಸಾಲ ಮತ್ತು ಅಥವಾ ಸಹಾಯಧನದ ಮೊತ್ತದ ಮಿತಿಯನ್ನು ಸರ್ಕಾರವು ಆಗಿಂದ್ದಾಗೆ ನಿಗದಿಪಡಿಸಬಹುದಾದ ಮಾರ್ಪಾಡುಗಳಿಗೆ ಒಳಪಟ್ಟಿರುತ್ತದೆ) | |
| | ಎ) **ಆರ್ಥಿಕ ಸಹಾಯ** : | ಅಗತ್ಯವಾದ ಹಣಕಾಸಿನ ನೆರವನ್ನು ಸರ್ಕಾರವು ನಿಗಮದ ಮೂಲಕ ಜಿಲ್ಲಾಧಿಕಾರಿಗಳಿಗೆ ಸಹಾಯಧನ ರೂಪದಲ್ಲಿ, ಈ ಕೆಳಗೆ ಸೂಚಿಸಿರುವ ಮಿತಿ ಹಾಗೂ ಮಾರ್ಗದರ್ಶಕ ಬೆಲೆಗಳಿಗೆ ಒಳಪಟ್ಟು, ನೀಡಲಾಗುವುದು. |
| | ಬಿ) ನಗರ ಪ್ರದೇಶಗಳಲ್ಲಿ ನಿವೇಶನ / ಬಡಾವಣೆಗಳ ನಿರ್ಮಾಣ ಸಲುವಾಗಿ ಭೂಮಿ ಖರೀದಿ/ ದೊರಕಿಸಲು ಇರುವ ಮಿತಿ : | (see table below) |

| ಕ್ರ.ಸಂ. | ವೆಚ್ಚದ ಮಿತಿ | ಪ್ರತಿ ಎಕರೆಗೆ ದರ |
|---|---|---|
| 1 | ಕಂದಾಯ ಗ್ರಾಮಗಳು | ರೂ. 50,000/- |
| 2 | ಹೋಬಳಿ ಕೇಂದ್ರಗಳು | ರೂ. 80,000/- |
| 3 | ಪಟ್ಟಣ ಮುನಿಸಿಪಾಲಿಟಿ/ಪಟ್ಟಣ ಪಂಚಾಯಿತಿ ಪ್ರದೇಶ | ರೂ. 1,00,000/- |
| 4 | ನಗರ ಸಭೆ ಪ್ರದೇಶಗಳು (1991 ಜನಗಣತಿಯ ಪ್ರಕಾರ 50000ಕ್ಕಿಂತ ಹೆಚ್ಚಿಗೆ ಜನಸಂಖ್ಯೆ ಇರುವ ಪ್ರದೇಶಗಳು) | ರೂ. 1,50,000/- |
| 5 | ನಗರ ಸಭೆ ಪ್ರದೇಶಗಳು (1991 ಜನಗಣತಿಯ ಪ್ರಕಾರ 100000 ಕ್ಕಿಂತ ಹೆಚ್ಚಿಗೆ ಜನಸಂಖ್ಯೆ ಇರುವ ಪ್ರದೇಶಗಳು) | ರೂ. 2,00,000/- |
| 6 | ನಗರ ಪಾಲಿಕೆ ಪ್ರದೇಶ | ರೂ. 2,00,000/- |

| | |
|---|---|
| ಸಿ) **ಮಾರ್ಗದರ್ಶಿ ಬೆಲೆ** : | ಜಿಲ್ಲಾಧಿಕಾರಿಗಳಿಗೆ ಆಶ್ರಯ ನಿವೇಶನಗಳನ್ನು ನಿರ್ಮಾಣ ಮಾಡಲು ಖಾಸಗಿ ಜಮೀನನ್ನು ಖರೀದಿಸಲು ಸರ್ಕಾರವು ಕರ್ನಾಟಕ ಮುದ್ರಾಂಕ ಶುಲ್ಕ ಕಾಯ್ದೆ 1957 ವಿಧಿ 45(ಬಿ) (3) ರಂತೆ ನಿಗದಿಪಡಿಸಿರುವ ಮಾರ್ಗದರ್ಶಿ ಬೆಲೆಗಳ ಆಧಾರದ ಮೇಲೆ ಗರಿಷ್ಟ 3 ಪಟ್ಟಿನವರೆಗೆ ಕೊಟ್ಟು ಖರೀದಿಸಲು ಅನುಮತಿ ನೀಡಲಾಗಿದೆ. ಆದಾಗ್ಯೂ ಜಿಲ್ಲಾಧಿಕಾರಿಗಳು ಮಾರ್ಗಸೂಚಿ ಬೆಲೆಯ ಪರಿಮಿತಿಯ ಒಳಗೆ ಭೂಮಿ ಖರೀದಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.<br><br>**ಸದರಿ ಯೋಜನೆಯಡಿಯಲ್ಲಿ ಮಾರ್ಗಸೂಚಿ ದರದ ಮೂರು ಪಟ್ಟು ದವರದವರೆಗೆ ಜಮೀನು ಖರೀದಿಸಲು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಈ ಕೆಳಗಿನಂತೆ ಅಧಿಕಾರಯುತ ಸಮಿತಿಯಯನ್ನು ರಚಿಸಲಾಗಿದೆ**.<br>ಜಿಲ್ಲಾಧಿಕಾರಿಗಳು : ಅಧ್ಯಕ್ಷರು<br>ಸ್ಥಳೀಯ ಶಾಸಕರು : ಸದಸ್ಯರು<br>ಉಪ ವಿಭಾಗಾಧಿಕಾರಿಗಳು : ಸದಸ್ಯರು<br>ತಹಸೀಲ್ದಾರರು : ಸದಸ್ಯರು<br>ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ : ಸದಸ್ಯ ಕಾರ್ಯದರ್ಶಿ<br><br>ಮೂರು ಪಟ್ಟಿನವರೆಗೆ ಜಮೀನು ಖರೀದಿಸಲು ಮಾತ್ರ ಅವಕಾಶವಿರುತ್ತದೆ. (ರೂ. 3.00 ಲಕ್ಷ ಮೀರದಂತೆ)<br>**(ಸರ್ಕಾರಿ ಆದೇಶ ಸಂಖ್ಯೆ ವಇ 65 ಹೆಚ್‌ಎಎಸ್ 2009 (ಭಾ), ಬೆಂಗಳೂರು, ದಿನಾಂಕ 12ನೇ ಏಪ್ರಿಲ್ 2010**. |
| ಡಿ) **ಭೂಮಿಯನ್ನು ಮಟ್ಟ ಮಾಡುವುದು, ಗುರುತಿನ ಕಲ್ಲು ನೆಡುವುದು ಸೇರಿದಂತೆ ನಿವೇಶನ ನಿರ್ಮಾಣ ಮಾಡುವ ಸಲುವಾಗಿ ತಗಲುವ ವೆಚ್ಚ ಇತ್ಯಾದಿ** | **ಪ್ರತಿ ನಿವೇಶನಕ್ಕೆ ರೂ. 450/- ಮಿತಿಗೊಳಿಸತಕ್ಕದ್ದು,**<br>ಈ ಬಾಬಿಗೆ ಸೇರಿದ ವೆಚ್ಚವನ್ನು ಗ್ರಾಮೀಣ ಆಶ್ರಯ ನಿವೇಶನಗಳ ಖರೀದಿಗಾಗಿ ಒದಗಿಸಲಾಗಿರುವ ಮುಂಗಡ ಹಣದಲ್ಲಿ ಖರ್ಚು ಹಾಕತಕ್ಕದ್ದು. |
| **ಫಲಾನುಭವಿಯ ಸ್ವ ಸಹಾಯ ವಂತಿಗೆ** : | ಯಾವ ಸ್ಥಳದಲ್ಲಿ ನಿವೇಶನಗಳು ಬೇಕಾಗುವ ಭೂಮಿಯ ಬೆಲೆಗಳು ಮೇಲೆ ತಿಳಿಸಿರುವ ಮಿತಿಗಳು ಮತ್ತು ಮಾರ್ಗಸೂಚಿ ಬೆಲೆಗಿಂತ ಹೆಚ್ಚಾಗಿರುತ್ತದೆಯೋ ಅಂತಹ ಹೆಚ್ಚಾದ ಬೆಲೆಯನ್ನು ಸಂಬಂಧಪಟ್ಟ ಫಲಾನುಭವಿಗಳು ಭರಿಸಿಕೊಳ್ಳಬಹುದಾಗಿರುತ್ತದೆ. ಈ ಯೋಜನೆಯಡಿಯಲ್ಲಿ ಒದಗಿಸಲಾಗುವ ಆರ್ಥಿಕ ಸಹಾಯದ ಜೊತೆಗೆ, ಫಲಾನುಭವಿಯು ತನ್ನ ಸಾಮರ್ಥ್ಯ ಹಾಗೂ ವಸತಿಯ ಅವಶ್ಯಕತೆಗೆ ಅನುಸಾರವಾಗಿ ಸಾಧ್ಯವಾದಷ್ಟು ಸ್ವಂತ ಉಳಿತಾಯ ಹೂಡಿಕೆ ಮಾಡಿ ಉತ್ತಮವಾದ ನಿವೇಶನವನ್ನು ಪಡೆದು ಹೆಚ್ಚಿನ ಹಾಗೂ ಉತ್ತಮ ಸೌಲಭ್ಯಗಳನ್ನು ಹೊಂದಬಹುದು. |

| | | |
|---|---|---|
| 4. | ಅರ್ಹತೆ ಮತ್ತು ಷರತ್ತುಗಳು: | 1 ಫಲಾನುಭವಿ ಸಂಬಂಧಪಟ್ಟ ನಗರ ಪ್ರದೇಶದಲ್ಲಿ ವಾಸಬಾಗಿರಬೇಕು ಮತ್ತು ನಗರಸಭೆಯ ನಿವೇಶನ ರಹಿತ/ವಸತಿರಹಿತರ ಪಟ್ಟಿಯಲ್ಲಿ ಸೇರಿರಬೇಕು.<br>2 ಫಲಾನುಭವಿಯು ಆರ್ಥಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯವು ರೂ. 32,000/- ಗಳ ಮಿತಿಗಿಂತ ಕಡಿಮೆ ಇರಬೇಕು.<br>3 ಸರ್ಕಾರವು ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ತೀವ್ರವಾಗಿ ಹಾಗೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ದೃಷ್ಟಿಯಿಂದ ವಸತಿ ನಿವೇಶನ ಮತ್ತು ಇತರೆ ವಸತಿ ಯೋಜನೆಗಳಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಮಹಿಳಾ ಫಲಾನುಭವಿಗಳನ್ನು ಮಾತ್ರ ಆಯ್ಕೆ ಮಾಡಬೇಕಾಗಿರುತ್ತದೆ. (ಅಂಗವಿಕಲರು, ವಿಧುರರು, ಮಾಜಿ ಸೈನಿಕರು ಮತ್ತು ಹಿರಿಯ ನಾಗರೀಕರನ್ನು ಹೊರತುಪಡಿಸಿ)<br>4 ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ನಿವೇಶನ/ವಸತಿ ಸೌಲಭ್ಯ ಪಡೆದಿರಬಾರದು.<br>5 ನಿಯಮಾನುಸಾರ ಪರಿಶಿಷ್ಟ ಜಾತಿ / ಪಂಗಡದವರಿಗೆ ಮೀಸಲಾತಿ ಇರುತ್ತದೆ.<br>6 ಮಾಜಿ ಯೋಧರು/ಅವರ ವಿಧವೆಯರು ಆಗಿದ್ದಲ್ಲಿ ನಿವೇಶನ ಹಂಚಿಕೆಯಲ್ಲಿ ಶೇ 1 ರಷ್ಟು ಮೀಸಲಾತಿ ಒದಗಿಸಲಾಗುವುದು. ಹೀಗೆ ಒದಗಿಸುವಾಗ ಬಡತನ ರೇಖೆಗಿಂತ ಆದಾಯ ಕಡಿಮೆ ಇರುವ ನಿಬಂಧನೆ ಇವರಿಗೆ ಅನ್ವಯವಾಗುವುದಿಲ್ಲ. ಒಂದು ವೇಳೆ ಯಾವುದೇ ವರ್ಷದಲ್ಲಿ ಸಾಕಷ್ಟು ಅರ್ಜಿಗಳು ಇಲ್ಲದೆ ಇದ್ದಲ್ಲಿ ಉಳಿದಿರುವ ನಿವೇಶನಗಳನ್ನು ಸಾಮಾನ್ಯ ವರ್ಗದವರಿಗೆ ಹಂಚಬಹುದಾಗಿದೆ.<br>7 ಫಲಾನುಭವಿಗಳ ಆಯ್ಕೆ : ಈಗಾಗಲೇ ಸಮೀಕ್ಷೆ ಮೂಲಕ ನಿವೇಶನ ರಹಿತರ ಪಟ್ಟಿ ಹಾಗೂ ಸ್ವಂತ ನಿವೇಶನವನ್ನು ಹೊಂದಿದ್ದು ಮನೆ ಇಲ್ಲದವರ ಪಟ್ಟಿಯನ್ನು ಸಮೀಕ್ಷೆ ಮೂಲಕ 2003 ರಲ್ಲಿ ತಯಾರಿಸಲಾಗಿದ್ದು, ಆ ಪಟ್ಟಿಯಲ್ಲಿ ಇನ್ನು ಸೇರ್ಪಡೆ ಆಗದೇ ಇರುವ ನೈಜ ಮತ್ತು ಅರ್ಹ ಅಭ್ಯರ್ಥಿಗಳನ್ನು ಸೇರಿಸಿ ಮತ್ತು ಅನರ್ಹ ಅಭ್ಯರ್ಥಿಗಳಿದ್ದರೆ ಅಂತಹವರನ್ನು ಪಟ್ಟಿಯಿಂದ ತೆಗೆದು ಹಾಕಿ ಆಗಿಂದ್ದಾಗೆ ಪರಿಷ್ಕೃತ ಪಟ್ಟಿಯನ್ನು ಪಟ್ಟಣ ಪಂಚಾಯಿತಿಯ ಮೂಲಕ ತಯಾರಿಸುತ್ತಿದ್ದು, ಈ ಪಟ್ಟಿಯನ್ನು ಪ್ರತಿ ಪಟ್ಟಣ ಪ್ರದೇಶಕ್ಕೆ ನೇಮಕ ಆಗಿರುವ ಆಶ್ರಯ ಸಮಿತಿಗೆ ಒದಗಿಸಲಾಗುತ್ತದೆ. ಹಾಗೂ ಆಶ್ರಯ ಸಮಿತಿಯು ಈ ಪಟ್ಟಿಯ ಆಧಾರದ ಮೇಲೆ ಫಲಾನುಭವಿಗಳ ಆಯ್ಕೆ ಮಾಡುತ್ತದೆ.<br>8 ನಿವೇಶನಗಳ ನಿರ್ಮಾಣದ ಸಲುವಾಗಿ ಸೂಕ್ತವಾದ ಮತ್ತು ಸಾಕಷ್ಟು ಭೂಮಿ ಲಭ್ಯತೆಯನ್ನು ಆಧರಿಸಿ ಆಯ್ಕೆಯಾದ ಪ್ರತಿ ಫಲಾನುಭವಿಗೆ ಗರಿಷ್ಠ 20x30 ಅಡಿ ವಿಸ್ತೀರ್ಣದ ನಿವೇಶನವನ್ನು ಒದಗಿಸಲಾಗುವುದು.<br>9 ಒಟ್ಟಾರೆ ಆಗಿಂದ್ದಾಗೆ ಸರ್ಕಾರವು ನಗರ ಆಶ್ರಯ ನಿವೇಶನ ಹಂಚಿಕೆ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ವಿಧಿಸಬಹುದಾದ ನಿಯಮ ಮತ್ತು ಷರತ್ತುಗಳನ್ನು ತಪ್ಪದೇ ಪಾಲಿಸಬೇಕು. |
| 5. | ಅನುಷ್ಠಾನದ ಉಸ್ತುವಾರಿ : | ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ , ಅಧಿಕಾರಿಗಳ ಉಸ್ತುವಾರಿ ಸಮಿತಿ ನೇಮಿಸಲಾಗಿದ್ದು, ಈ ಸಮಿತಿಯು ಒಟ್ಟಾರೆಯಾಗಿ ಈ ಯೋಜನೆಯ ಅನುಷ್ಠಾನದ ಉಸ್ತುವಾರಿಯನ್ನು ನೋಡಿಕೊಳ್ಳುತ್ತದೆ. ಈ ಸಮಿತಿಯಲ್ಲಿ ಇರುವ ಇತರೆ ಸದಸ್ಯರೆಂದರೆ ಜಿಲ್ಲಾ ಪಂಚಾಯಿತಿಯ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಮತ್ತು ಕಾರ್ಯಪಾಲಕ ಅಭಿಯಂತರರು, ಉಪವಿಭಾಗದ ಸಹಾಯಕ ಆಯುಕ್ತರು, ಭೂಸೇನಾ ನಿಗಮದ ಉಪನಿರ್ದೇಶಕರು ಮತ್ತು ಸಂಬಂಧಪಟ್ಟ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಹಣಾಧಿಕಾರಿಗಳು. |
| 6. | ಇತರೆ ವಿಷಯಗಳು : | ಕರ್ನಾಟಕ ರಾಜ್ಯದಲ್ಲಿ ವಾಸವಾಗಿರುವ ಪ್ರತಿಯೊಬ್ಬ ನಿವೇಶನ ರಹಿತ/ವಸತಿ ರಹಿತರಿಗೆ ಮುಂದಿನ ಐದು ವರ್ಷಗಳಲ್ಲಿ ಒಂದು ನಿವೇಶನ ಒದಗಿಸುವುದು ಹಾಗೂ ಮನೆಯನ್ನು ಕಟ್ಟಿಕೊಳ್ಳಲು ಸಹಾಯಹಸ್ತ ನೀಡುವುದು ಕರ್ನಾಟಕ ಸರ್ಕಾರ ಹಾಗೂ ನಿಗಮದ ಸದುದ್ದೇಶವಾಗಿದೆ. ಯಾರು ಈ ಯೋಜನೆಯಡಿಯಲ್ಲಿ ಅರ್ಹರಾಗಿರುವರೋ ಅಂತಹವರು ಮಾತ್ರ ಈ ಯೋಜನೆಯ ಸೌಲಭ್ಯ ಪಡೆಯಬಹುದಾಗಿದ್ದು, ಯಾವುದೇ ಕಾರಣಕ್ಕೂ ಮನೆ/ನಿವೇಶನ ಇರುವವರು ಈ ಸವಲತ್ತನ್ನು ಪಡೆಯಲು ಅರ್ಜಿ ಹಾಕಬಾರದು. |

**ಹೆಚ್ಚಿನ ವಿವರಗಳಿಗೆ ಈ ಕೆಳಕಂಡವರನ್ನು ಸಂಪರ್ಕಿಸಿ :**


1. ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ನಂ. 1,2,3,4, ಐ.ಟಿ. ಪಾರ್ಕ್, 1ನೇ ಮಹಡಿ, 4ನೇ ಮುಖ್ಯರಸ್ತೆ, ರಾಜಾಜಿನಗರ ಕೈಗಾರಿಕಾ ಪ್ರದೇಶ, ರಾಜಾಜಿನಗರ, ಬೆಂಗಳೂರು - 560 010. (ದೂರವಾಣಿ : **91-80-23118888**, ಫ್ಯಾಕ್ಸ್ : **91-80-23145085**)

**ಇ-ಮೇಲ್** : **rgrhcl@rediffmail.com /rgrhcl@kar.nic.in /**

**ವೆಬ್‌ಸೈಟ್** : http:\\ashraya.kar.nic.in


1. ಜಿಲ್ಲೆಯ ಜಿಲ್ಲಾಧಿಕಾರಿಗಳು, ಆಯಾಯ ಜಿಲ್ಲೆಗಳು
2. ರಾಜ್ಯದ ಎಲ್ಲಾ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಮಹಾನಗರ ಪಾಲಿಕೆ/ನಗರಸಭೆ ಮತ್ತು ಮುಖ್ಯಾಧಿಕಾರಿಗಳು, ಪುರಸಭೆ/ಪಟ್ಟಣ ಪಂಚಾಯತ್

**********